# ಪ್ರಯಾಸದ ಪ್ರಯಾಣದಲ್ಲಿ ಲವಲವಿಕೆಯ ಪ್ರೀತಿ ಸಿಕ್ಕಿದೆ

**◆ ರಾಜ್ಯದ ಸುತ್ತಾಟದ ಅನುಭವದ ಹಿನ್ನೆಲೆಯಲ್ಲಿ 'ಮನೆ ಮನೆ ಮಹಾಲಕ್ಷ್ಮಿ' ಹೇಗೆನಿಸುತ್ತದೆ?**

ಚಿತ್ರೀಕರಣ ಆರಂಭಿಸುವ ಪೂರ್ವದ ಚಟುವಟಿಕೆ ತುಂಬ ಕಷ್ಟ. ದೀರ್ಘ ಪ್ರಯಾಣ ಇರುತ್ತದೆ. ಹವಾಮಾನದ ವೈಪರಿತ್ಯವನ್ನು ಎದುರಿಸಬೇಕು. ರಾಜ್ಯವ್ಯಾಪಿ ಸುತ್ತಾಟ ನನ್ನಲ್ಲೂ ರಂಗು ರಂಗಿನ ಪಲ್ಲಟವನ್ನು ಉಂಟುಮಾಡಿದೆ. ಊಟ– ತಿಂಡಿ ಸಿಕ್ಕಿದ್ದನ್ನು ತಿನ್ನಬೇಕು. ಒಂದು ಶೂಟಿಂಗ್‌ನಿಂದ ಮತ್ತೊಂದು ಶೂಟಿಂಗ್ ಹೋಗುವ ಮುನ್ನ ಕೋವಿಡ್ ಪರೀಕ್ಷೆ ಮಾಡಿಸಬೇಕು. ಪ್ರಯಾಣದ ನಿರಂತರತೆ ಜೊತೆ ಕೊರೊನಾದಿಂದ ಜೋಪಾನವಾಗಿ ಇರಬೇಕು. ಬೆಳಿಗ್ಗೆಯಿಂದ ಸಂಜೆ ತನಕ ಚಿತ್ರೀಕರಣ ಮಾಡಿದರೆ ರಾತ್ರಿ ಮತ್ತೊಂದೂರಿಗೆ ಹೋಗಬೇಕು. ಕೆಲಸ ಕಷ್ಟ ಎಂದು ಅನ್ನಿಸುವುದೇ ಇಲ್ಲ. ಜನರ ಪ್ರೀತಿ ಮಾತಿಗೆ ನಿಲುಕುವುದಿಲ್ಲ. ಸೆಲೆಬ್ರಿಟಿಗಳಾದರೆ ಬೇಕಿರುವುದನ್ನು ಹೇಳುತ್ತಾರೆ, ಬೇಡ ಅನಿಸಿದ್ದನ್ನು ಮುಚ್ಚಿಟ್ಟುಕೊಳ್ಳುತ್ತಾರೆ. ಸಾಮಾನ್ಯರಿಗೆ ಮುಚ್ಚುಮರೆ ಇಲ್ಲ, ನಾಟಕೀಯತೆ ಮೊದಲೇ ಇರುವುದಿಲ್ಲ. ಉದಾರಣೆಗೆ, ಒಂದು ಹಳ್ಳಿ ತುಂಬ ಬಡವರು, ಒಂದು ಹೊತ್ತಿನ ಊಟಕ್ಕೂ ಕಷ್ಟಪಡುತ್ತಾರೆ. ಅಂತವರ ಮನೆಗೆ ಹೋಗಿದ್ದೆವು. ಮನೆಯಲ್ಲಿ ಅಜ್ಜಿ ನನ್ನ ಕಾಲಿಗೆ ಎರಗಿ ನಮಸ್ಕರಿಸಿದರು. 'ಇಲ್ಲಿ ಫೋನ್ ಸಿಗ್ನಲ್ ಕೂಡ ಸಿಗಲ್ಲ. ನಮ್ಮ ಮನೆಗೆ ನೀವು ಬರುವುದೇ ಇಲ್ಲ ಎಂದೇ ಅರ್ಜಿ ಹಾಕಿದ್ದೆವು' ಎಂದು ಅಜ್ಜಿ ಹೇಳಿದರು. ಒಬ್ಬಟ್ಟು ಊಟ ಮಾಡಿಸಿ ಕಳಿಸಿದರು. ಜನ ತಮ್ಮ ಮನೆ ಮಗಳ ಪ್ರೀತಿಯ ಧಾರೆಯನ್ನು ಎರೆಸಿದ್ದಾರೆ.

**◆ ಕಾರ್ಯಕ್ರಮಕ್ಕೆ ಸ್ಕ್ರಿಪ್ಟ್ ಮಾಡಿರುತ್ತೀರಾ?**

ಖಂಡಿತ ಇದು ಸ್ಕ್ರಿಪ್ಟ್ ಆಧಾರಿತ ಕಾರ್ಯಕ್ರಮ ಅಲ್ಲ. ನಿರ್ದೇಶಕರು ಗೇಮ್ ಸ್ಟಾರ್ಟ್ ಎಂದು ಹೇಳಿದ ತಕ್ಷಣ ಶುರುವಾದ ಚಿತ್ರೀಕರಣ ನಿರಂತರವಾಗಿ ನಡೆಯುತ್ತಿರುತ್ತದೆ. ಇತ್ತೀಚಿನ ಸನ್ನಿವೇಶ ಒಂದು ನೋಡಿ 'ನನ್ನ ಅಕ್ಕನ ಗಂಡ ಟೀಚರ್ ಎಂದರು' ಹೌದಾ? ಸ್ಕೂಲ್ ಟೀಚರ್ ಗುಡ್ ಎಂದು ನಾನು ಸಂತೋಷ ವ್ಯಕ್ತಪಡಿಸುತ್ತಿದ್ದೆ. ಅಷ್ಟರಲ್ಲಿ ಅವರು 'ನಮ್ಮ ಅಕ್ಕ ಬಾಣಂತನಕ್ಕೆ ಬಂದಾಗ ಅವರು ಇನ್ನೊಂದು ಮದುವೆ ಮಾಡಿಕೊಂಡಿದ್ದರು' ಎಂದರು. ಆಗ ಆಘಾತ ಆಯಿತು. ಹೀಗಾಗಲಿ ಎಂದು ಬರವಣಿಗೆ ಮಾಡಿಕೊಳ್ಳಲು ಸಾಧ್ಯವೇ? ಎಲ್ಲ ನೇರ ಮತ್ತು ಸಹಜವಾಗಿ ಬರಬೇಕು ಎನ್ನುವುದು ಕಾರ್ಯಕ್ರಮದ ಉದ್ದೇಶ. ಇಲ್ಲಿ ಯಾವುದೂ ನಾಟಕೀಯವಾಗಿ ಕಾಣುವುದಿಲ್ಲ. ಆ ಕ್ಷಣಕ್ಕೆ ಏನು ಬರುತ್ತೋ ಹಾಗೆಯೇ ತೆಗೆದುಕೊಳ್ಳುತ್ತೇವೆ.

**◆ ಈ ಹಿಂದಿನ ಕೆಲಸಗಳ ಜೊತೆ ಇವತ್ತಿನ ಮಹಾಲಕ್ಷ್ಮಿಯನ್ನು ಇಟ್ಟು ನೋಡಿದರೆ ಹೇಗಿರುತ್ತದೆ?**

ಶ್ರೀಸಾಮಾನ್ಯರಿಗೆ ಕಾರ್ಯಕ್ರಮ ಎಂದು ಖುಷಿ ಆಯಿತು. ನನಗೆ ಸಾಮಾನ್ಯರ ಜೊತೆ ಅನುಸಂಧಾನ ಮಾಡುವುದು ಇಷ್ಟ. ಇಲ್ಲಿ ಯಾವುದೂ ನಕಲಿ ಎಂದು ನನಗೆ ಅನ್ನಿಸುವುದಿಲ್ಲ. ಎಲ್ಲ ತಾಜ ಮತ್ತು ನೈಜವಾಗಿರುತ್ತದೆ. ಸಾಮಾನ್ಯರು ತಮ್ಮನ್ನು ತಾವು ಹೀಗೆ ಬಿಂಬಿಸಿಕೊಳ್ಳಬೇಕು ಎಂದು ಯತ್ನಿಸುವುದಿಲ್ಲ. ಅವರು ಹೇಗಿರುತ್ತಾರೆಯೋ ಹಾಗೆಯೇ ಕಾಣಿಸಿಕೊಳ್ಳುತ್ತಾರೆ. ಅವರ ಮಾತುಗಳನ್ನು ಕೇಳಿದರೆ ನಗರ ಜೀವನದಲ್ಲಿ ಕಾಣೆಯಾಗಿರುವ ಮುಗ್ಧತೆ ಮತ್ತು ನಮ್ಮನ್ನು ಆವರಿಸಿರುವ ನಾಟಕೀಯತೆ ನೆನಪಾಗಿ ಮರುಕ ಉಂಟಾಗುತ್ತದೆ. ಈಹಿಂದೆ ಒಮ್ಮೆ ಸೆಲೆಬ್ರಿಟಿಗೆ ಕಾರ್ಯಕ್ರಮ ಏಕೆ ಮಾಡುತ್ತೀರಿ. ಸಾಮಾನ್ಯರಿಗಾಗಿ ಮಾಡಿ ಎನ್ನುವ ವಾದವನ್ನು ಮಾಡಿದ್ದೆ. ಹಳ್ಳಿಜನರ ಬದುಕು ಅವರ ಮುಗ್ಧತೆ ಕರುಣೆ– ನಗುವನ್ನೂ ನೀಡುತ್ತದೆ. ಮೊನ್ನೆ ಮಂಡ್ಯದಲ್ಲಿ ದಂಪತಿಗೆ ಪ್ರಪೊಸ್ ಮಾಡಲು ಹೇಳಿದ್ದೆವು 'ಬುಲ್ ಬುಲ್ ಮಾತಾಡಕಿಲ್ವಾ ಎನ್ನುವುದನ್ನು ಬುಲ್ ಬುಲ್ ಮುಖ ತೊಳ್ಕೊಳೊದಿಲ್ವಾ' ಅಂದಿದ್ದರು. ಸೆಟ್‌ನಲ್ಲಿ ಇದ್ದವರೆಲ್ಲ ಸಿಕ್ಕಾಪಟ್ಟೆ ನಕ್ಕಿದ್ದರು. ಬೆಂಗಳೂರಿನಲ್ಲಿ ನಿಷೇಧಾಜ್ಞೆ ಇದೆ. ಮನೆ ಬೇಗ ಸೇರಬೇಕು ಎನ್ನುವ ಬಯಕೆ ಇದ್ದರೂ ಅದನ್ನು ಮರೆತು ಚಿತ್ರೀಕರಣ ಮಾಡುತ್ತೇವೆ. ಪ್ರಸಾರ ಮಾಡಲು ಸಾಧ್ಯ ಆಗದೇ ಇದ್ದರು ಮತ್ತೊಂದು ಆಟ ಆಡಿಸಿ ಗ್ರಾಮಸ್ಥರನ್ನು ಸಂತೋಷಪಡುತ್ತೇವೆ.

**ಸುಷ್ಮಾ ಕೆ. ರಾವ್**
**ಝೀ ಕನ್ನಡದ 'ಮನೆ ಮನೆ ಮಹಾಲಕ್ಷ್ಮಿ' ನಿರೂಪಕಿ**



**◆ ಒಬ್ಬ ಹುಡುಗ ತಾನೂ ಟೀವಿಯಲ್ಲಿ ಬದುಕು ಕಟ್ಟಿಕೊಳ್ಳಬೇಕು ಏನು ಮಾಡಲಿ ಎಂದು ಕೇಳಿದರೆ ನಿಮ್ಮ ಸಲಹೆ ಏನು?**

ನಾನು ನಟನೆಗೆ ಆಕಸ್ಮಿಕವಾಗಿ ಬಂದಿದ್ದೇನೆ. ಸುಮಾರು ಮಂದಿ ಈ ರೀತಿ ಕೇಳಿದ್ದಾರೆ. ಅವರಿಗೆ ನಾನು 'ನಿಮಗೆ ಇಲ್ಲಿ ಬರುವ ಉದ್ದೇಶ ಇದ್ದರೆ, ಕಷ್ಟದ ಬಗ್ಗೆ ಯೋಚಿಸಬೇಡಿ. ಇಂದಿನ ಕಷ್ಟ ಮುಂದಿನ ಸುಖಕ್ಕೆ ಹೂಡಿಕೆ ಎಂದೇ ಭಾವಿಸಬೇಕು. ನಾನು 'ಗುಪ್ತಗಾಮಿನಿ' ಮಾಡುವಾಗ ಆರೂರು ಜಗದೀಶ್ ಮತ್ತು ರಾಮ್ ಜೀ ಸಹಾಯಕ ನಿರ್ದೇಶಕರಾಗಿದ್ದರು. ಈಗ ಅವರಿಬ್ಬರೂ ದೊಡ್ಡ ನಿರ್ಮಾಪಕ– ನಿರ್ದೇಶಕರಾಗಿದ್ದಾರೆ. ಅವರ ಬೆಳವಣಿಗೆಯ ಏರಿಳಿತಗಳನ್ನು ಹತ್ತಿರದಿಂದ ಗಮನಿಸಿದ್ದೇನೆ. ಅವರನ್ನು ಉದಾಹರಣೆ ನೀಡಿಯೇ ಬದ್ಧತೆ ಬಗ್ಗೆ' ಹೇಳುತ್ತೇನೆ. ಒಂದು ಹಳ್ಳಿಯಲ್ಲಿ ಡೊಳ್ಳುಕುಣಿತ ಪ್ರೇಮಿ ಸಿನಿಮಾ ಕ್ಷೇತ್ರಕ್ಕೆ ಬರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು.

ಇಂಡಸ್ಟ್ರೀ ಸಮುದ್ರ ಇದ್ದಹಾಗೆ ಅವಕಾಶ ಸಾಕಷ್ಟಿವೆ. ಅದರಲ್ಲಿ ನಿಮಗೆ ಯಾವುದು ಸೂಕ್ತ ಎಂದು ನಿರ್ಧರಿಸಬೇಕು. ಅದನ್ನೇ ಮಾಡುವ ಉದ್ದೇಶದಲ್ಲಿ ಕೆಲಸದ ಕೌಶಲ್ಯ ಮತ್ತು ಅನುಭವಗಳಿಸಲು ಯತ್ನಿಸಬೇಕು. ಅದು ಸಿಗುವತನಕ ಬೇರೆ ಇನ್ನೇನೋ ಮಾಡುತ್ತೇನೆ ಎನ್ನವುದು ಸರಿಯಲ್ಲ. ಬೆಂಗಳೂರಿಗೆ ಬಂದ ನಂತರ ವಸತಿ ಊಟದ ಸಮಸ್ಯೆ ಆಗುತ್ತದೆ. ಅದನ್ನೂ ಲೆಕ್ಕಿಸದೆ ಗುರಿ ಬಿಟ್ಟರೆ ಬೇರೆ ಜೀವನ ಇಲ್ಲ ಎಂದು ನಿರ್ಧರಿಸಬೇಕು. ಅದೃಷ್ಟ ನಂಬಿಕೊಂಡು ಬರಬಾರದು.

**■ ರಾಘವೇಂದ್ರ ಕೆ.**